ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೆ ಹಣವನ್ನು ಕೊಟ್ಟರೆ ಅದನ್ನು ಅವರು ತಿಂದು ಹಾಕುತ್ತಾರೆ. ಅದ್ದರಿಂದ ಅವರಿಗೆ ಹತ್ತಿರ ಇರುವ ಕಾಡುಗಳಿಂದ ಮನೆಗಳನ್ನು ಕಟ್ಟಿಕೊಳ್ಳಲು ಮರ ಮುಟ್ಟುಗಳನ್ನು ಒದಗಿಸುವಂತೆ ಅನುಕೂಲ ಮಾಡಿಕೊಟ್ಟಿದ್ದೇವೆ. ಅವರಿಗೆ ಆಗಿರತಕ್ಕ ನಷ್ಟವನ್ನೆಲ್ಲಾ ನಾವು ತುಂಬಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೇಸಿಗೆ ಕಾಲ ಬಂದರೆ ನೂರಾರು ಬೆಂಕಿ ಅನಾಹುತಗಳು ಆಗುತ್ತವೆ. ಅದನ್ನೆಲ್ಲಾ ಸರ್ಕಾರದವರು ತುಂಬಿಕೊಡಬೇಕಾದರೆ ಸರ್ಕಾರದ ಬೊಕ್ಕಸದಲ್ಲಿರತಕ್ಕ ಹಣವನ್ನೆಲ್ಲಾ ಅದಕ್ಕೆ ಕೊಡಬೇಕಾಗುತ್ತದೆ.

———

Providing of Lands for Village Extension.

*Q.—654. Sri S. M. GURADDI (Muddebihal).—

Will the Minister for Revenue be pleased to state :—

(*a*) whether it is a fact that the people of Talikote have represented to them to provide land necessary for village extension ;

(*b*) whether it is a fact that they have remitted the required amount in the treasury according to the Government Order ;

(*c*) if so, the stage at which the matter stands at present ?

A.—Sri M. V. KRISHNAPPA (Minister for Revenue).—

(*a*) Yes.

(*b*) Yes.

(*c*) As the Town Panchayat Committee is not in favour of the acquisition, the matter has been dropped.

ಶ್ರೀ ಎಸ್. ಎಂ. ಗುರೆಡ್ಡಿ.—ತಾಳೀಕೋಟೆಯ ಜನರು ಗ್ರಾಮ ಬಡಾವಣೆಗೆ ಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಂಬಂಧದಲ್ಲಿ ಸರ್ಕಾರದ ಖಜಾನೆಗೆ ಎಷ್ಟು ಹಣವನ್ನು ಎಷ್ಟು ವರ್ಷಗಳ ಹಿಂದೆ ಜಮಾ ಮಾಡಿದರು ?

†ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಸರ್ಕಾರದ ಖಜಾನೆಗೆ ಹಣವನ್ನು ಜಮಾಮಾಡಿ 4-5 ವರ್ಷಗಳಾಯಿತು. ಆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಅಲ್ಲಿನ ಟೌನ್ ಪಂಚಾಯಿತಿ ಸಮಿತಿಯವರು ಒಂದು ನಿರ್ಣಯವನ್ನು ಮಾಡಿ ಅದು ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ನಮಗೆ ಬೇಡ ಎಂದು ಹೇಳಿದ್ದಾರೆ. ಆದ್ದರಿಂದ ಅದು ತಡವಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಅವರು ಎಷ್ಟು ಹಣವನ್ನು ಯಾವ ಇಸವಿಯಲ್ಲಿ ಸರ್ಕಾರದ ಖಜಾನೆಗೆ ಜಮಾ ಮಾಡಿದರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು 20,659 ರೂಪಾಯಿ 65 ಪೈಸೆಯನ್ನು ಈಗ್ಗೆ ನಾಲ್ಕು ವರ್ಷಗಳ ಹಿಂದೆ ಜಮಾ ಮಾಡಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ್ಗೆ ನಾಲ್ಕು ವರ್ಷಗಳ ಹಿಂದೆ ಅವರು ಖಜಾನೆಗೆ ಹಣವನ್ನು ಜಮಾ ಮಾಡುವ ಕಾಲಕ್ಕೆ ಆ ಪಂಚಾಯಿತಿಯವರ ಅಭಿಪ್ರಾಯ ಸರ್ಕಾರಕ್ಕೆ ಗೊತ್ತಿರಲಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಅದಕ್ಕೆ ಸಂಬಂಧಪಟ್ಟ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಆಗ ಬೇಕಾಗಿರುವುದರಿಂದ ಪಂಚಾಯಿತಿಯವರು ಅದಕ್ಕೆ ಒಪ್ಪಿಗೆ ಕೊಡಬೇಕು. ಆದರೆ ಅವರು ಅದಕ್ಕೆ ಒಪ್ಪಿಗೆಯನ್ನು ಕೊಡುತ್ತಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಅಲ್ಲಿಯ ಸದಸ್ಯರವರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದ್ದರಿಂದ ಮತ್ತೆ ಅದಕ್ಕೆ ಪಂಚಾಯಿತಿಯವರ ಅನುಮತಿ ಅವಶ್ಯ ಇರುವುದಿಲ್ಲ. ಅವರ ಸಲುವಾಗಿ ಆ ಸೈಟುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದೇ ತರಹ ರೋಗ ಅನೇಕ ಊರುಗಳಲ್ಲಿ ಇದೆ. ಈ ರೋಗಕ್ಕೆ ಮದ್ದು ಕಂಡು ಹಿಡಿಯಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ಸಾಮಾನ್ಯವಾಗಿ ಪಂಚಾಯಿತಿಯ ಜೇರ್ಮನ್ ಅವರ ಹೊಲಗಳೇ ಊರಿನ ಅಕ್ಕಪಕ್ಕದಲ್ಲಿ ಇರುತ್ತವೆ. ಆದ್ದರಿಂದ ಅವರು ಅಕ್ಸಿಸಿಷನ್ನಿಗೆ ಒಪ್ಪುವುದಿಲ್ಲ. ಇಂಥಾ ಸಂದರ್ಭದಲ್ಲಿ ಏನು ಮಾಡಬೇಕೆಂದು ಸರ್ಕಾರದವರು ಯೋಚನೆ ಮಾಡಬೇಕು.

Health Unit at Kudavalli Agrahara

*Q.—474. **Smt. B. L. SUBBAMMA** (Chickmagalur).—

Will the Minister for Health be pleased to state :—

(*a*) since how many years the hospital under the Health Department at Kudavalli Agrahara in Chickmagalur Taluk was in existence ;

(*b*) the predominant reasons for transferring the same to Vastare Village ;

(*c*) the Medical facilities they have contemplated to provide for the benefit of the people of Kuduvalli and the surrounding villages ?

A.—**Sri K. NAGAPPA ALVA** (Minister for Health).—

(*a*) For about 14 years *i.e.* from 2nd February 1949 to 28th August 1963.

(*b*) Originally, the Primary Health Unit was sanctioned to Vasthara owing to non-availability of Building facilities for running the Health Unit at Vasthara as a temporary measure it was located at Kuduvalli. Even at Kuduvalli the Building was not suitable for the Health Unit. Later, the people of Vasthara provided a suitable Building with all facilities. So the Primary Health Unit was shifted to Vasthara in 1963.

(*c*) A maternity sub-centre has been located at Kuduvalli under the Primary Health Unit and the village is included under the Primary Health unit area of Vasthara for all Health Services.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನ್ಯಾಯವು, 1949ನೇ ಇಸವಿಯಿಂದಲೂ ಚಿಕ್ಕಮಗಳೂರು ತಾಲ್ಲೂಕು ಕುಡುವಳ್ಳಿ ಅಗ್ರಹಾರದಲ್ಲಿದ್ದ ಆಸ್ಪತ್ರೆಯನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದ್ದೀರಿ, ಆದ್ದರಿಂದ ಈಗ ಕುಡುವಳ್ಳಿ ಮತ್ತು ಸುತ್ತಮುತ್ತ ಇರುವ ಗ್ರಾಮಗಳ ಜನಗಳಿಗೆ ಔಷಧೋಪಚಾರವನ್ನು ಒದಗಿಸುವ ಬಗ್ಗೆ ಏನು ಅನುಕೂಲವನ್ನು ಮಾಡಿಕೊಟ್ಟಿದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ ಅಲ್ಲಿ ತಾತ್ಕಾಲಿಕವಾಗಿ ಪ್ರಸೂತಿಕಾ ಉಪ ಕೇಂದ್ರವನ್ನು ಸ್ಥಾಪಿಸಿ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ.

2-00 P.M.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—16 ವರ್ಷದಿಂದ ಇದ್ದ, ಈ ಆಸ್ಪತ್ರೆಯನ್ನು ಬದಲಾಯಿಸುವುದು ಸರ್ಕಾರದ ಉದ್ದೇಶವಾಗಿತ್ತೋ ಅಥವಾ ಯಾರಾದರೂ ಶಾಸಕರ ಪ್ರಭಾವ ಸರ್ಕಾರದ ಮೇಲೆ ಬಿದ್ದಿತ್ತೋ ?